ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: DPI-CPI0C7-2(NWS)/1/2026-E-2062350 ದಿನಾಂಕ: 30-06-2026

**-: ಸುತ್ತೋಲೆ :-**

ವಿಷಯ: **2026-27ನೇ ಸಾಲಿಗೆ ಖಾಸಗಿ ಶಾಲೆಗಳಿಗೆ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನೊಂದಣಿ (Registration) ಹಾಗೂ ಶಾಲಾ ಡೈಸ್ ಪಡೆಯುವ ಕುರಿತು ಅವಧಿಯನ್ನು ವಿಸ್ತರಿಸಿ ಅವಕಾಶ ಕಲ್ಪಿಸಿರುವ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರದ ಸಂಖ್ಯೆ: ಇಪಿ 41 ಪಿಜಿಸಿ 2023, ದಿನಾಂಕ:31-01-2023.
2. ಕರ್ನಾಟಕ ಶಿಕ್ಷಣ ಕಾಯ್ದೆ- 1983 ಸೆಕ್ಷನ್ 30 ಮತ್ತು 31.
3. ಕರ್ನಾಟಕ ಶಿಕ್ಷಣ ಸಂಸ್ಥೆಗಳು[ವರ್ಗೀಕರಣ ಮತ್ತು ನೊಂದಣಿ] ನಿಯಮಗಳು- 1997.
4. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ-2009.
5. Karnataka Educational Institutions [classification, Regulation and Prescription of Curricula etc] [Amendment] Rules-2018.
6. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 52 ಪಿಜಿಸಿ 2020 ದಿನಾಂಕ: 07.03.2022. ಮತ್ತು ತಿದ್ದುಪಡಿ ದಿನಾಂಕ:11.03.2022.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ:75 ಪಿಜಿಸಿ 2022, ದಿನಾಂಕ: 25.04.2022
8. ಸರ್ಕಾರದ ಆದೇಶ ಸಂಖ್ಯೆ:ಇಡಿ 76 ಪಿಜಿಸಿ 2022, ದಿನಾಂಕ:14.10.2022
9. ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: DPI-CPI0C7(2)(USM)01/2023 ಕಂ.ನಂ. 9866854 ದಿನಾಂಕ: 09.02.2023.
10. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 42 ಪಿಜಿಸಿ 2023 ದಿನಾಂಕ: 28.02.2023
11. ಈ ಕಚೇರಿ ಜ್ಞಾಪನ ಸಂಖ್ಯೆ: DPI-CPI0C7-5(OT)/42/2023-E-1105045 ದಿನಾಂಕ: 07-10-2023
12. The Karnataka Educational Institution(Appellate Authority)Rules 1998
13. ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ:03-02-2026 18-04-2026 ಮತ್ತು 04-06-2026
14. ಸರ್ಕಾರದ ಆದೇಶ ಸಂಖ್ಯೆ:ಇಪಿ 1 ಪಿಜಿಸಿ 2026 (ಭಾಗ-1), ಬೆಂಗಳೂರು, ದಿನಾಂಕ: 15.05.2026 ರ ಅಧಿಸೂಚನೆ-1, ಅಧಿಸೂಚನೆ-2 ಮತ್ತು ಅಧಿಸೂಚನೆ-3
15. ಸರ್ಕಾರದ ಆದೇಶ ಸಂಖ್ಯೆ: ಇಪಿ 1 ಪಿಜಿಸಿ 2026 (ಭಾಗ-1), ಬೆಂಗಳೂರು ದಿನಾಂಕ:15.05.2026
16. ಈ ಕಛೇರಿಯ ಸುತ್ತೋಲೆಯ ಪತ್ರ ಸಂಖ್ಯೆ:DPI-CPIOC7-2(OT)/11/2026-E-2131263 ದಿನಾಂಕ: 04-06-2026

*********

ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಸೆಕ್ಷನ್- 30, 31 ಮತ್ತು 32ರಂತೆ ಹಾಗೂ The Karnataka Educational Institutions(Classification and Registration) Rules 1997 ಮತ್ತು ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ:ED 709 PGC 2017, ದಿನಾಂಕ:07-03-2018ರ ಅಧಿಸೂಚನೆಯಂತೆ ಹೊಸ ಶಾಲಾ ನೊಂದಣಿ ಮತ್ತು ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ಕೋರಿದ ಶೈಕ್ಷಣಿಕ ವರ್ಷದ ಹಿಂದಿನ ಸಾಲಿನ ನವೆಂಬರ್ 30 ಅಥವಾ ಅದಕ್ಕೂ ಮೊದಲು ಇಲಾಖಾ ವೆಬ್ ಸೈಟ್ ನಲ್ಲಿ ಹೊಸ ಶಾಲಾ ನೊಂದಣಿ ಕುರಿತು ಅರ್ಜಿ ಸಲ್ಲಿಸಿ ನಿಯಮಾನುಸಾರ ನೊಂದಣಿ ಪಡೆಯಬೇಕಾಗಿರುತ್ತದೆ. ಅದರಂತೆ ಉಲ್ಲೇಖ-13 ರನ್ವಯ 2026-27ನೇ ಸಾಲಿಗೆ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ/ ಪ್ರೌಢಶಾಲೆ ನೊಂದಣಿ ಹಾಗೂ ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ ಇಲಾಖಾ ವೆಬ್‌ಸೈಟ್‌ನಲ್ಲಿ https://schooleducation.karnataka.gov.in/ಆಡಳಿತ ಮಂಡಳಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ದಿನಾಂಕ:30-06-2026 ರವರೆಗೆ ಕಾಲಾವಕಾಶ ಕಲ್ಪಿಸಲಾಗಿತ್ತು.

ಮುಂದುವರೆದು, 2026-27ನೇ ಸಾಲಿಗೆ ಹೊಸದಾಗಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ/ ಪ್ರೌ ಶಾಲೆ ನೊಂದಣಿಗೆ ಹಾಗೂ ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು **ದಿನಾಂಕ: 01-07-2026 ರಿಂದ ದಿನಾಂಕ: 15-07-2026 ರವರೆಗೆ** 15 ದಿನಗಳ ಕಾಲ ಅಂತಿಮವಾಗಿ ಅವಕಾಶ ನೀಡಲಾಗಿದೆ. ಈಗಾಗಲೇ 2026-27ನೇ ಸಾಲಿಗೆ ಹೊಸ ಶಾಲಾ ನೊಂದಣಿ ಮತ್ತು ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿ ತಿರಸ್ಕೃತಗೊಂಡ ಆಡಳಿತ ಮಂಡಳಿಗಳಿಗೆ ಹಾಗೂ ಹೊಸದಾಗಿ ಅರ್ಜಿಗಳನ್ನು ಸಲ್ಲಿಸುವ ಆಡಳಿತ ಮಂಡಳಿಗಳಿಗೂ ಈ ಅವಕಾಶ ಅನ್ವಯವಾಗುತ್ತದೆ.

ಉಚಿತ ಮತ್ತು ಕಡ್ಡಾಯ ಮಕ್ಕಳ ಹಕ್ಕು ಶಿಕ್ಷಣ ಕಾಯ್ದೆ-2009ರ ಸೆಕ್ಷನ್-19 ಮತ್ತು 25 ರಂತೆ ನೀಡಿರುವ ಷೆಡ್ಯೂಲ್ ನಂತೆ ಶಾಲೆಗಳು ಪ್ರತಿ ಶೈಕ್ಷಣಿಕ ವರ್ಷದಲ್ಲಿ 1 ರಿಂದ 5ನೇ ತರಗತಿಗಳಿಗೆ ಕನಿಷ್ಟ 200 ಕಾರ್ಯನಿರ್ವಹಣಾ ದಿನಗಳು/ 800 ಗಂಟೆಗಳ ಬೋಧನಾ ಅವಧಿ ಹಾಗೂ 6 ರಿಂದ 8ನೇ ತರಗತಿಗಳಿಗೆ ಕನಿಷ್ಟ ಕನಿಷ್ಟ 220 ಕಾರ್ಯನಿರ್ವಹಣಾ ದಿನಗಳು/1000 ಗಂಟೆಗಳ ಬೋಧನಾ ಅವಧಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.ಈಗಾಗಲೇ 2026-27ನೇ ಶೈಕ್ಷಣಿಕ ಸಾಲು ಪ್ರಾರಂಭವಾಗಿರುವುದರಿಂದ ಹಾಗೂ ಹೊಸ ಶಾಲಾ ನೋಂದಣಿಗೊಂಡ ನಂತರ ಕೊರತೆಯ ಕಾರ್ಯನಿರ್ವಹಣಾ ದಿನಗಳು ಹಾಗೂ ಬೋಧನಾ ಅವಧಿ ಸರಿದೂಗಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಷರತ್ತಿನನ್ವಯ **2026-27ನೇ ಸಾಲಿನಲ್ಲಿ ಹೊಸದಾಗಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿ ಹೊಸ ಶಾಲಾ ನೋಂದಣಿ ಅನುಮತಿ ಪಡೆದ ಆಡಳಿತ ಮಂಡಳಿಗಳು ಹೊಸ ಶಾಲೆಗಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅಂದರೆ 2027-28ನೇ ಸಾಲಿನಲ್ಲಿ ಶಾಲೆಯನ್ನು ಪ್ರಾರಂಭಿಸತಕ್ಕದ್ದು**.

ಈಗಾಗಲೇ 2026-27ನೇ ಶೈಕ್ಷಣಿಕ ಸಾಲು ಪ್ರಾರಂಭವಾಗಿರುವುದರಿಂದ ಹೊಸ ಶಾಲಾ ನೊಂದಣಿಗೆ ಸಲ್ಲಿಕೆಯಾಗುವ ಅರ್ಜಿಗಳ ಪರಿಶೀಲನೆಯನ್ನು ವೇಳಾಪಟ್ಟಿಯಲ್ಲಿ ನೀಡಿದಂತೆ ನಿಗದಿತ ಕಾಲಾವಧಿಯನ್ನು ಅರ್ಜಿಗಳನ್ನು ಇತ್ಯರ್ಥಪಡಿಸಲು ಅಗತ್ಯ ಕ್ರಮ ವಹಿಸುವುದು. ಈ ಹಿನ್ನೆಲೆಯಲ್ಲಿ ಉಪನಿರ್ದೇಶಕರ ಕಚೇರಿಯ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು ತಮ್ಮ ಲಾಗಿನ್‌ನಲ್ಲಿ ಸಲ್ಲಿಕೆಯಾದ ಅರ್ಜಿಗಳನ್ನು ಆಯಾ ದಿನವೇ ಪರಿಶೀಲಿಸಿ ನಿಯಮಾನುಸಾರ ಅರ್ಜಿಯನ್ನು ಅನುಮೋದಿಸಿ ಅಥವಾ ತಿರಸ್ಕರಿಸಿ ಇತ್ಯರ್ಥಪಡಿಸಿದಲ್ಲಿ ಆಯಾ ದಿನವೇ ಡಿ.ಎಸ್.ಸಿ. ಮೂಲಕ ಅನುಮೋದಿಸಿ ಆದೇಶವನ್ನು ನೀಡಲು ಕ್ರಮವಹಿಸಲು ಅಥವಾ ನಿಯಮಾನುಸಾರ ಇಲ್ಲದ ಅರ್ಜಿಗಳನ್ನು ROLL BACK ಮಾಡಲು ಸೂಚಿಸಿದೆ.

ಅನುಮೋದಿಸಿ ನೊಂದಣಿ ಪ್ರಮಾಣ ಪತ್ರ ನೀಡುವಾಗ ಉಚಿತ ಮತ್ತು ಕಡ್ಡಾಯ ಮಕ್ಕಳ ಹಕ್ಕು ಶಿಕ್ಷಣ ಕಾಯ್ದೆ-2009ರ ಸೆಕ್ಷನ್-19 ಮತ್ತು 25ರಂತೆ ನೀಡಿರುವ ಷೆಡ್ಯೂಲ್ ನಂತೆ ಷರತ್ತು ವಿಧಿಸುವುದು. ಯಾವುದೇ ಕಾರಣಕ್ಕೂ ಅರ್ಜಿಯನ್ನು ಪರಿಶೀಲಿಸಲು ವಿಳಂಬ ಮಾಡಿದಲ್ಲಿ ಅಥವಾ Overdue ಆಗಲು ಅವಕಾಶ ನೀಡಿದಲ್ಲಿ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಇವರನ್ನೇ ಹೊಣೆಗಾರರನ್ನಾಗಿಸಲಾಗುವುದು.

ಉಳಿದಂತೆ **ಉಲ್ಲೇಖ(1) ರಿಂದ (15)**ರವರೆಗಿನ ಸುತ್ತೋಲೆಗಳಲ್ಲಿನ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ.

**2026-27ನೇ ಸಾಲಿಗೆ ಹೊಸ ಶಾಲಾ ನೊಂದಣಿಗೆ ಅರ್ಜಿ ಸಲ್ಲಿಸಲು ಕಾಲಮಿತಿ ವಿಸ್ತರಿಸಿ ನಿಗದಿಪಡಿಸಿರುವ ವೇಳಾಪಟ್ಟಿ.**

| ಕ್ರ.ಸಂ | ವಿಷಯ | ದಿನಾಂಕ |
|---|---|---|
| 01 | 2026-27ನೇ ಸಾಲಿಗೆ ಹೊಸ ಶಾಲೆಗಳ ನೊಂದಣಿಗಾಗಿ ಹೊಸ ತಂತ್ರಾಂಶವನ್ನು ಬಿಡುಗಡೆ ಮಾಡುವುದು. | **01-07-2026** |
| 02 | ಅರ್ಹ ನೊಂದಾಯಿತ ಸಂಸ್ಥೆಗಳು ಹೊಸ ಶಾಲೆಗಳ ನೊಂದಣಿ/ಉನ್ನತೀಕರಿಸುವ ಶಾಲೆಗಳ ನೊಂದಣಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅವಧಿ. | **01-07-2026 ರಿಂದ** <br> **15-07-2026** |
| 03 | Cash mode ಮಾಡಿಕೊಂಡಲ್ಲಿ ನೊಂದಣಿ ಶುಲ್ಕ ಪಾವತಿ ಚಲನ್ ಜನರೇಟ್ ಮಾಡಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | **09-07-2026** |
| 04 | Online mode/UPI ಆಯ್ಕೆ ಮಾಡಿಕೊಂಡಲ್ಲಿ ನೊಂದಣಿ ಶುಲ್ಕ ಪಾವತಿ ಚಲನ್ ಜನರೇಟ್ ಮಾಡಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | **13-07-2026** |
| 05 | **ವಿಷಯ ನಿರ್ವಾಹಕರು (DCW)** <br> ಲಾಗಿನ್‌ಗೆ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ವಾಸ್ತವಾಂಶದ ಷರಾದೊಂದಿಗೆ ಮುಂದಿನ ಹಂತಕ್ಕೆ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ <br> **ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 05 ಕರ್ತವ್ಯದ ದಿನಗಳು** | **02-07-2026 ರಿಂದ** <br> **21-07-2026** |

| | | |
|---|---|---|
| 06 | **ಪತ್ರಾಂಕಿತ ಸಹಾಯಕರು (DOF)**<br>ತಮ್ಮ ಲಾಗಿನ್‌ನಲ್ಲಿ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ವಾಸ್ತವಾಂಶದ ಷರಾದೊಂದಿಗೆ ಮುಂದಿನ ಹಂತಕ್ಕೆ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ<br><br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 05 ಕರ್ತವ್ಯದ ದಿನಗಳು** | **03-07-2026 ರಿಂದ**<br><br>**28-07-2026** |
| | ಯಾವುದೇ ಶಾಲೆ Random Selection ನಲ್ಲಿ ಸ್ಥಳ ಭೇಟಿಗೆ ಆಯ್ಕೆಯಾದಲ್ಲಿ ಅಂತಹ ಶಾಲೆಗೆ ಮಾತ್ರ ತ್ರಿಸದಸ್ಯ ಸಮಿತಿಯಿಂದ ವರದಿ ಪಡೆದು ಅಪ್‌ಲೋಡ್ ಮಾಡಿ ವಾಸ್ತವಾಂಶದ ವರದಿಯೊಂದಿಗೆ ಉಪನಿರ್ದೇಶಕರಿಗೆ ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕ<br><br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 07 ಕರ್ತವ್ಯದ ದಿನಗಳು** | **04-07-2026 ರಿಂದ**<br><br>**30-07-2026** |
| 07 | **ಉಪನಿರ್ದೇಶಕರು (DDPI) ಅರ್ಜಿಗಳ Roll Back ಮಾಡಲು**-ತಮ್ಮ ಲಾಗಿನ್‌ನಲ್ಲಿ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ಆಕ್ಷೇಪಣೆಗಗಳಿದ್ದಲ್ಲಿ ನಿಖರವಾಗಿ ದಾಖಲಿಸಿ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಸರಿಪಡಿಸಿ ಪುನರ್ ಸಲ್ಲಿಸಲು ಸೂಚಿಸಿ ಆಡಳಿತ ಮಂಡಳಿಗೆ ರೋಲ್ ಬ್ಯಾಕ್ ಮಾಡಲು ಅಂತಿಮ ದಿನಾಂಕ<br><br>**(ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 05 ಕರ್ತವ್ಯದ ದಿನಗಳು) ಎರಡನೇ ಬಾರಿಗೆ ಅಥವಾ ಅವಧಿ ಮುಗಿದ ನಂತರದಲ್ಲಿ Roll Backಗೆ ಅವಕಾಶವಿರುವುದಿಲ್ಲ).** | **06-07-2026 ರಿಂದ**<br><br>**05-08-2026** |
| 07 ಎ | **ಉಪನಿರ್ದೇಶಕರು (DDPI) Roll Back ಮಾಡದ ಅರ್ಜಿಗಳನ್ನು ವಿಲೇ ಮಾಡಲು** - ತಮ್ಮ ಲಾಗಿನ್‌ನಲ್ಲಿ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ಯಾವುದೇ ಆಕ್ಷ್ಪಪಣೆಗಳಿಲ್ಲದಿದ್ದಲ್ಲಿ ಅಂದರೆ Roll Back ಅವಶ್ಯಕತೆ ಇಲ್ಲದ ಅರ್ಜಿಗಳನ್ನುಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ಸಕಾರಣ ಸಹಿತ ತಿರಸ್ಕೃತ ಆದೇಶ ಹೊರಡಿಸಲು ನಿಗದಿಪಡಿಸಿರುವ ಕಾಲಾವಧಿ<br><br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 07 ಕರ್ತವ್ಯದ ದಿನಗಳು** | **07-07-2026 ರಿಂದ**<br><br>**07-08-2026** |
| 08 | **Roll Back ಪಡೆದ ಆಡಳಿತ ಮಂಡಳಿಗಳು ಮರು ಸಲ್ಲಿಸಲು** - ಉಪನಿರ್ದೇಶಕರಿಂದ Roll Backಆಗಿ ಬಂದ ಅರ್ಜಿಯಲ್ಲಿನ ದಾಖಲೆಗಳನ್ನು ಸರಿಪಡಿಸಿ ಹಿಂತಿರುಗಿಸಲು ಅಂತಿಮ ದಿನಾಂಕ.<br><br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 07 ಕರ್ತವ್ಯದ ದಿನಗಳು** | **08-07-2026 ರಿಂದ**<br><br>**17-08-2026** |
| 09 | **ಉಪನಿರ್ದೇಶಕರು (DDPI) Roll back ನಂತರ ಮರುಸಲ್ಲಿಸಿದ ಅರ್ಜಿಗಳ ವಿಲೇ ಮಾಡಲು** -ಆಡಳಿತ ಮಂಡಳಿಯು Roll back ನಂತರ ಮರುಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ಸಕಾರಣ ಸಹಿತ ತಿರಸ್ಕೃತ ಆದೇಶ ಹೊರಡಿಸಲು ನಿಗದಿಪಡಿಸಿರುವ ಕಾಲಾವಧಿ (ಅಂತಿಮ ದಿನಾಂಕದ ನಂತರ ಯಾವುದೇ ಅರ್ಜಿಗಳು ಬಾಕಿ ಇರುವಂತಿಲ್ಲ)<br><br>**ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 05 ಕರ್ತವ್ಯದ ದಿನಗಳು** | **09-07-2026 ರಿಂದ**<br><br>**24-08-2026** |
| 10 | **ಉಪನಿರ್ದೇಶಕರು (DDPI)** ಡೈಸ್‌ಕೋಡ್ ಪಡೆಯಲು ಮಂಜೂರಾತಿ/ ನೊಂದಣಿ ನೀಡಿದ ಶಾಲೆಗಳಿಗೆ ಉಪನಿರ್ದೇಶಕರೇ ನೇರವಾಗಿ SATS ಮುಖಾಂತರ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ | **05-09-2026** |

| | | |
|---|---|---|
| | ಅಗತ್ಯ ಮಾಹಿತಿಗಳನ್ನು ಅಪ್‌ಲೋಡ್ ಮಾಡಿ MOEಗೆ ಕಳುಹಿಸಿ ತದನಂತರ ಎಂ.ಹೆಚ್ ಆರ್.ಡಿ. ಕಛೇರಿಗೆ ಕಳುಹಿಸುವುದು. ಮುಂದುವರೆದು ಸಂಬಂಧಿಸಿದ ಶಾಲೆಗೆ ಡೈಸ್ ಕೋಡ್ ಪಡೆದು ನೊಂದಣಿ ಪತ್ರದಲ್ಲಿ ದಾಖಲಿಸಿ ಡಿಜಿಟಲ್ ಸಹಿಯೊಂದಿಗೆ ನೊಂದಣಿ ಆದೇಶ ನೀಡಲು ನಿಗದಿಪಡಿಸಿರುವ ದಿನಾಂಕ: | |

ಮೇಲ್ಮನವಿ ಪ್ರಾಧಿಕಾರ (APPELLATE AUTHORITY):-ಉಲ್ಲೇಖ(12)ರಂತೆ ನಿಯಮ 130 ರಲ್ಲಿತಿರಸ್ಕೃತವಾಗಿರುವ ಅರ್ಜಿಗಳ ಸಂಬಂಧ ಆಡಳಿತ ಮಂಡಳಿಗಳು ಅರ್ಜಿ ತಿರಸ್ಕೃತ ಆದೇಶ ಹೊರಡಿಸಿದ 30 ದಿನಗಳ ಒಳಗೆ ಆನ್‌ಲೈನ್‌ನಲ್ಲಿ ಮಾತ್ರ ಮೇಲ್ಮನವಿ ಸಲ್ಲಿಸಲು ಹೊಸ ಶಾಲಾ ನೊಂದಣಿ ಮೇಲ್ಮನವಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಸಂಬಂಧಿಸಿದ ಪ್ರಾಧಿಕಾರವಾದ ಆಯಾ ವಿಭಾಗದ ಆಯುಕ್ತರುಗಳಿಗೆ ಆನ್‌ಲೈನ್‌ನಲ್ಲಿ ಮೇಲ್ಮನವಿ ಸಲ್ಲಿಸಿ ಅಹವಾಲು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ.

ತದನಂತರ ಮೇಲ್ಮನವಿ ಪ್ರಾಧಿಕಾರಿಗಳು ಸಲ್ಲಿಕೆಯಾದ ಮೇಲ್ಮನವಿ ಅರ್ಜಿಗಳನ್ನು ಸ್ವೀಕರಿಸಿದ 30 ದಿನಗಳೊಳಗೆ ಪರಿಶೀಲಿಸಿ ಆದೇಶ ನೀಡುವುದರೊಂದಿಗೆ ಪುರಸ್ಕೃತ ಅಥವಾ ತಿರಸ್ಕೃತಗೊಂಡ ಬಗ್ಗೆ ಆನ್‌ಲೈನ್ ತಂತ್ರಾಂಶದಲ್ಲಿಯೇ ಆದೇಶ ಅಪ್‌ಲೋಡ್ ಮಾಡಿ ಅನುಮೋದಿಸಿ, ಇತ್ಯರ್ಥಪಡಿಸಿ ಸೂಕ್ತ ದಾಖಲೆಗಳನ್ನು ಅಪ್ ಲೋಡ್ ಮಾಡಿ ಉಪನಿರ್ದೇಶಕರಿಗೆ ಸಲ್ಲಿಸುವ ಕ್ರನಮಕ್ಕಾಗಿ ಆಡಳಿತ ಮಂಡಳಿಗಳಿಗೆ ಹಿಂದಿರುಗಿಸುವುದು. ತದನಂತರ ಉಪನಿರ್ದೇಶಕರು ಇಂತಹ ಅರ್ಜಿಗಳನ್ನು ಆನ್‌ಲೈನ್ ನಲ್ಲಿಯೇ ನಿಯಮಾನುಸಾರ ಕ್ರಮವಹಿಸುವುದು.ಯಾವುದೇ ಕಾರಣಕ್ಕೂ ಮೇಲ್ಮನವಿ ಸಂಬಂಧ ಭೌತಿಕವಾಗಿ ಪ್ರಸ್ತಾವನೆಯನ್ನು ಪರಿಗಣಿಸುವುದಿಲ್ಲ.

ಮುಂದುವರೆದು, ಹೊಸ ಖಾಸಗಿ ಅನುದಾನರಹಿತ ಶಾಲೆಗಳಿಗೆ ನೋಂದಣಿ ನೀಡುವುದರ ಜೊತೆಯಲ್ಲಿಯೇ ಡೈಸ್ ಕೋಡ್ ಅನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಆಯಾ ಶಾಲಾ ಆಡಳಿತ ಮಂಡಳಿಗೆ ನೀಡುವ ಜವಾಬ್ದಾರಿ ನೊಂದಣಿ ಪ್ರಾಧಿಕಾರಿಗಳು ಹಾಗೂ ಅನುಷ್ಠಾನಾಧಿಕಾರಿಗಳಾಗಿರುವುದರಿಂದ ಉಪನಿರ್ದೇಶಕರು (ಆಡಳಿತ) ರವರದ್ದೇ ಆಗಿರುವುದರಿಂದನಿಯಮಾನುಸಾರ ಕ್ರಮವಹಿಸತಕ್ಕದ್ದು.

**ಶಾಲಾ ಆಡಳಿತ ಮಂಡಳಿಗಳಿಗೆ ವಿಶೇಷ ಸೂಚನೆ:-**

- ವಿಸ್ತರಿಸಿದ ಕಾಲಾವಕಾಶದಲ್ಲಿ ಹೊಸ ಶಾಲಾನೋಂದಣಿ ಅರ್ಜಿ ಸಲ್ಲಿಸಲು ಬಯಸುವ ಶಾಲಾ ಆಡಳಿತ ಮಂಡಳಿಗಳು ಈ ಸುತ್ತೋಲೆಯೊಂದಿಗೆ ನೀಡಿರುವ ವೇಳಾಪಟ್ಟಿಯನ್ನು ಮತ್ತು ಉಲ್ಲೇಖಿಸಿರುವ ಸುತ್ತೋಲೆಗಳಲ್ಲಿನ ಅಂಶಗಳನ್ನು ಸೂಕ್ತವಾಗಿ ಗಮನಿಸಿ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಲು ಕ್ರಮವಹಿಸುವುದು.
- ಉಲ್ಲೇಖ(14) ಮತ್ತು (15)ರನ್ವಯ ಕೆಲವು ನಿಯಮಗಳಿಗೆ ತಿದ್ದುಪಡಿ/ ಬದಲಾವಣೆಯಾಗಿರುವುದರಿಂದ ಆ ಪ್ರಕಾರ ಇಲಾಖಾ ತಂತ್ರಾಂಶವನ್ನು ಇಂದೀಕರಿಸಿ ದಿನಾಂಕ:08-06-2026 ರಿಂದ ಚಾಲ್ತಿಗೊಳಿಸಲಾಗಿದೆ. ಹಾಗೂ ಹಿಂದಿನ ಮಾನದಂಡ/ನಿಯಮಗಳಂತೆಯೂ ಸಹ ಪ್ರಸ್ತುತ 2026-27ನೇ ಸಾಲಿಗೆ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವ ಪ್ರಾಥಮಿಕ /ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನೋಂದಣಿ (Registration) ಹಾಗೂ ಶಾಲಾ ಡೈಸ್ ಪಡೆಯುವ ಕುರಿತು ಕ್ರಮವಹಿಸಬಹುದಾಗಿದೆ.
- ಉಲ್ಲೇಖ(16)ರಂತೆ ಹೊರಡಿಸಲಾಗಿರುವ ಸುತ್ತೋಲೆಯೊಂದಿಗೆ ಅನುಬಂಧಿಸಿರುವ ನಿಗದಿತ ನಮೂನೆಯಲ್ಲಿನ ಅಂಶಗಳಿಗೆ ರೂ.500/-ಗಳ ಛಾಪಾ ಕಾಗದದಲ್ಲಿ ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ.
- ಯಾವುದೇ ಆಡಳಿತ ಮಂಡಳಿಯು ಹೊಸ ಶಾಲೆ ಪ್ರಾರಂಭ ಅಥವಾ ಉನ್ನತೀಕರಿಸಿದ ತರಗತಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಹೊಸ ಶಾಲೆ ಅಥವಾ ಉನ್ನತೀಕರಿಸಿದ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವಂತಿಲ್ಲ. ಹಾಗೇನಾದರೂ ಅನುಮೋದನೆ/ನೋಂದಣಿ ಪಡೆಯದೇ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಲ್ಲಿ ಅಂತಹ ಶಾಲೆಯನ್ನು "ಅನಧಿಕೃತ ಶಾಲೆ" ಎಂದು ಪರಿಗಣಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು.

**ಆಯುಕ್ತರು**
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ:**

01.ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
02.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು ಮಾಹಿತಿಗಾಗಿ.**

1. ಮಾನ್ಯಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ ಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
5. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
7. ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್ ವಿಭಾಗ- ಇವರಿಗೆ ಕ್ರಮಕ್ಕಾಗಿ.
8. ಕಚೇರಿ ಪ್ರತಿ.